## ಎಪಿಕ್ ಬ್ರೌಸರ್

ಬೆಂಗಳೂರು ಮೂಲದ ಹಿಡನ್ ರಿಫ್ಲೆಕ್ಸ್ ಆರಂಭಿಸಿರುವ 'ಎಪಿಕ್ ಬ್ರೌಸರ್' ಇದುವರೆಗೆ 2 ಲಕ್ಷಕ್ಕೂ ಅಧಿಕ ಬಳಕೆದಾರರನ್ನು ಹೊಂದಿದ್ದು 194 ದೇಶಗಳಲ್ಲಿ ಬಳಕೆಯಲ್ಲಿದೆ. ಇದರ ಸೈಡ್‌ಬಾರ್ ಫೇಸ್‌ಬುಕ್, ಟ್ವಿಟ್ಟರ್, ಭಾರತೀಯ ಮಾಹಿತಿ, ವಿಡಿಯೋಗಳನ್ನು ಒಳಗೊಂಡಂತೆ 1500ಕ್ಕೂ ಅಧಿಕ ವಿಷಯಗಳನ್ನು ಒಳಗೊಂಡಿದೆ.

ಇದರ ವಿಶೇಷತೆಯೆಂದರೆ 13 ಭಾರತೀಯ ಭಾಷೆಗಳಲ್ಲಿ ಯಾವುದೇ ವೆಬ್‌ಸೈಟ್ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಈ ಮಾಡಬಹುದು. ಜೊತೆಗೆ 14 ಟಿವಿ ಚಾನೆಲ್‌ಗಳು, ನೂರಾರು ಟೀವಿ ಶೋ, ಸಾವಿರಾರು ಚಲನಚಿತ್ರಗಳು, ವಿವಿಧ ನಿಯತಕಾಲಿಗಳು, ವೃತ್ತಪತ್ರಿಕೆಗಳ ಸುದ್ದಿಗಳು ಒಂದೇ ಕ್ಲಿಕ್‌ನಲ್ಲಿ ನಿಮಗೆ ಲಭ್ಯ. ಈ ಬ್ರೌಸರ್ ಅತ್ಯಂತ ವೇಗವಾಗಿದ್ದು ಮೊಝಿಲಾ ಆಧಾರದ ಮೇಲೆ ರೂಪಿಸಲಾಗಿದೆ. ಇದಲ್ಲದೇ ಬೇಡವಾದ 35 ಲಕ್ಷಕ್ಕೂ ಅಧಿಕ ವೆಬ್‌ಸೈಟ್‌ಗಳನ್ನು ನಿಮ್ಮ ಕಂಪ್ಯೂಟರ್‌ನಿಂದ ದೂರವಿಡುತ್ತದೆ.

ಇದನ್ನು ಉಚಿತವಾಗಿ www.epicbrowser.com ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

## ಸಿಟಿ ಲೆನ್ಸ್ ಅಪ್ಲಿಕೇಶನ್




ನೋಕಿಯಾ ಲುಮಿಯಾ ಮೊಬೈಲ್‌ನಲ್ಲಿ ಸಿಟಿ ಲೆನ್ಸ್ ಅಪ್ಲಿಕೇಶನ್ ಅನ್ನು ಹಾಕಲಾಗಿದ್ದು ಇದು ಸಂಚಾರಿ ನಿರ್ದೇಶನ ನೀಡುವ ಹಾಗೂ ಮ್ಯಾಪ್ ಮಾಡುವ ವಿಶೇಷ ಸಾಮರ್ಥ್ಯ ಹೊಂದಿದೆ. ಇದು 8 ಟೈಲ್ ಸ್ಕ್ರೀನ್ ಹೊಂದಿದ್ದು ಸಮೀಪದ ಆಹಾರ, ಹೋಟೆಲ್, ಶಾಪಿಂಗ್, ಖ್ಯಾತ ವಿಷಯಗಳು, ತಮಾಷೆ, ತಾಣಗಳು ಮತ್ತು ಸಂಚಾರ ಸಾಗಣೆ– ಈ ವಿಷಯಗಳಲ್ಲಿ ವಿಂಗಡಿಸಲಾಗಿದೆ. ಯಾವುದೇ ವಿಷಯದ ಮೇಲೆ ಕುಟ್ಟಿ. ಅದು ಕ್ಯಾಮೆರಾ ಅಥವಾ ಮ್ಯಾಪ್ ಅನ್ನು ತೆರೆಯುತ್ತದೆ. ಉದಾಹರಣೆಗೆ 'ತಾಣ' ವಿಷಯಕ್ಕೆ ಹೋದರೆ ಸಮೀಪದ ನೋಡತಕ್ಕಂತಹ ಸ್ಥಳಗಳು, ಸ್ಥಳ ಗುರುತು, ಕ್ಲಬ್, ಸಿನಿಮಾ ಥಿಯೇಟರ್ ಮೊದಲಾದವುಗಳ ಬಗ್ಗೆ ಮಾಹಿತಿ ನೀಡುತ್ತದೆ. ಜೊತೆಗೆ ಸಂಪರ್ಕಕ್ಕಾಗಿ ವಿಳಾಸ, ಫೋನ್ ನಂಬರ್, ಹೇಗೆ ಹೋಗಬೇಕು ಎಂಬುದರ ಬಗ್ಗೆ ಕೂಡಾ ಮಾಹಿತಿ ನೀಡುತ್ತದೆ.

ಇನ್ನೊಂದು ವಿಶೇಷವೆಂದರೆ ಇದರ ಮ್ಯಾಪಿಂಗ್ ಸೌಲಭ್ಯ. ಅಪ್ಲಿಕೇಶನ್ ತೆರೆದು ಫೋನ್ ಅನ್ನು ಮೇಲಕ್ಕೆತ್ತಿ ಹಿಡಿದರೆ ಸುತ್ತಮುತ್ತಲಿನ ಸ್ಥಳಗಳನ್ನು ಕ್ಯಾಮೆರಾ ವ್ಯೂಫೈಂಡರ್‌ನಲ್ಲಿ ನೋಡಬಹುದು. ಆ ಸ್ಥಳಗಳ ಹೆಸರೂ ಆ ಚಿತ್ರಗಳ ಮೇಲೆ ಮೂಡುತ್ತದೆ. ಫೋನ್ ಅನ್ನು ಮೇಜಿನ ಮೇಲೆ ಇಡಿ. ಇದೇ ಸ್ಥಳಗಳು ಭೂಪಟದ ಮೇಲೆ ಮೂಡುತ್ತವೆ. ಈ ಅಪ್ಲಿಕೇಶನ್ ಭಾರತದ ಬಹುತೇಕ ನಗರಗಳಲ್ಲಿ ಲಭ್ಯ.




## ಯಿಪ್ಪೀ ಕ್ಲಬ್ಸ್

ಇದು ಸಾಮಾಜಿಕ ಜಾಲತಾಣಗಳ ಕಾಲ. ಆದರೆ ಫೇಸ್‌ಬುಕ್, ಟ್ವಿಟ್ಟರ್, ಗೂಗ್ಲ್ ಹೊರತಾಗಿ ಕ್ಲಬ್‌ಗಳ ಜೊತೆ ಸಂಪರ್ಕಿಸುವ ತಾಣಗಳು ಬಂದಿವೆ. ನೀವು ಎದುರಿಸುತ್ತಿರುವ ಸಮಸ್ಯೆಗಳು ಇತರರಿಗೂ ಇರಬಹುದು, ಹೊಂದಿರುವ ಹವ್ಯಾಸಗಳಿರುವ ಬೇರೆ ವ್ಯಕ್ತಿಗಳು ಇರಬಹುದು, ಅಂಥವರ ಜೊತೆ ಸ್ನೇಹಸೇತುವಾಗುವ 'ಯಿಪ್ಪೀಕ್ಲಬ್ಸ್' ಭಾರತದ ಮೊದಲ ಕ್ಲಬ್ ತಾಣವಾಗಿದೆ. ಇದನ್ನು www.indiaparenting.com ಆರಂಭಿಸಿದೆ. ಅದು ವಿವಿಧ 600 ಕ್ಲಬ್‌ಗಳನ್ನು ಹೊಂದಿದೆ. ಅಂದರೆ ನಿಮ್ಮ ಆಸಕ್ತಿಗೆ ಅನುಗುಣವಾಗಿ ಜೀವನಶೈಲಿ, ಪ್ರೀತಿಪ್ರೇಮ ಮತ್ತು ಸಂಬಂಧ, ಕ್ರೀಡೆ/ಹವ್ಯಾಸ, ಪೋಷಕರು ಮತ್ತು ಆರೋಗ್ಯಕ್ಕೆ ಸಂಬಂಧಿಸಿದಂತೆ ಐದು ವಿಭಾಗಗಳನ್ನು ಮಾಡಲಾಗಿದೆ. ಈಗಾಗಲೇ ಕ್ಲಬ್ ಸೇರಿರುವವರ ಜೊತೆ ನಿಮ್ಮ ಸಮಸ್ಯೆ ಹಂಚಿಕೊಂಡು ಪರಿಹಾರ ಕೇಳಬಹುದು. ಹವ್ಯಾಸವನ್ನು ಬೆಳೆಸಿಕೊಳ್ಳಬಹುದು.

## ಫೈರ್‌ಫಾಕ್ಸ್ ರೀಸೆಟ್ ಸೌಲಭ್ಯ

ಫೈರ್‌ಫಾಕ್ಸ್ ವೆಬ್ ಬ್ರೌಸರ್ ನಿಧಾನವಾಗುವುದು, ಕ್ರ್ಯಾಷ್ ಆಗುವುದು ಮೊದಲಾದ ತೊಂದರೆಗಳನ್ನು ಅನುಭವಿಸುತ್ತಿದ್ದೀರಾ? ಹೊಸದಾದ ಪುನಃ ಸಂಯೋಜಿಸು (ರೀಸೆಟ್)ವ ಸೌಲಭ್ಯವನ್ನು ಮೊಝಿಲ್ಲಾ ನೀಡಿದ್ದು ಇದು ಬಹುತೇಕ ಸಮಸ್ಯೆಗಳನ್ನು ನಿವಾರಿಸಲಿದೆ. ಆದರೆ ನಿಮ್ಮ ಅವಶ್ಯಕ ಮಾಹಿತಿಗಳನ್ನು ಅದು ರಕ್ಷಿಸುತ್ತದೆ.

ಈ ರೀಸೆಟ್ ಸವಲತ್ತಿನಿಂದ ಹೊಸ 'ಪ್ರೊಫೈಲ್ ಫೋಲ್ಡರ್' ಸೃಷ್ಟಿಯಾಗಿ ಅದು ನಿಮ್ಮ ಬುಕ್‌ಮಾರ್ಕ್, ಪಾಸ್‌ವರ್ಡ್, ಕೂಕೀಸ್, ಹಿಂದೆ ಬ್ರೌಸ್ ಮಾಡಿದ ಮಾಹಿತಿಗಳನ್ನು ರಕ್ಷಿಸುತ್ತದೆ. ಅಂದರೆ ಅವೆಲ್ಲವೂ ಹೊಸ ಪ್ರೊಫೈಲ್ ಫೋಲ್ಡರ್‌ನಲ್ಲಿ ರಕ್ಷಿಸಲ್ಪಡುತ್ತವೆ. ಈ ಹೊಸ ಸೌಲಭ್ಯ ಫೈರ್ ಫಾಕ್ಸ್ 13 (ಬೀಟಾ)ದಲ್ಲಿ ಲಭ್ಯ.

ನೀವು ಮಾಡಬೇಕಾದುದು ಇಷ್ಟೇ. ಕಿತ್ತಳೆ ವರ್ಣದ 'ಟ್ರಬಲ್‌ಶೂಟಿಂಗ್ ಇನ್‌ಫಾರ್ಮೇಶನ್' ಬಟನ್ ಮೇಲೆ ಕ್ಲಿಕ್ ಮಾಡಿ. ಜೊತೆಗೆ ಅಡ್ರೆಸ್ ಬಾರ್ ನಲ್ಲಿ 'ಅಬೌಟ್:ಸಪೋರ್ಟ್' ಎಂದು ಟೈಪ್ ಮಾಡಿ. ನಂತರ ರೀಸೆಟ್ ಬಟನ್ ಮೇಲೆ ಕ್ಲಿಕ್ ಮಾಡಿ. ಫೈರ್‌ಫಾಕ್ಸ್ ತಾನಾಗೇ ಮುಚ್ಚಿಕೊಂಡು ರೀಸೆಟ್ ಪ್ರಕ್ರಿಯೆ ಶುರುವಾಗುತ್ತದೆ. ವಿಂಡೋ ಇಂಪೋರ್ಟ್ ಆಗುವ ಎಲ್ಲಾ ಮಾಹಿತಿಯನ್ನು ಪಟ್ಟಿ ಮಾಡುತ್ತದೆ. ಕೊನೆಗೆ 'ಫಿನಿಷ್' ಬಟನ್ ಮೇಲೆ ಕ್ಲಿಕ್ ಮಾಡಿ. ಫೈರ್‌ಫಾಕ್ಸ್ ತೆರೆದುಕೊಳ್ಳುತ್ತದೆ.

■ ಎಸ್.ತುಂಬೆ